ಕರ್ನಾಟಕ ಸರ್ಕಾರ

ಉಪತಹಶೀಲ್ದಾರರು ನಾಡಕಾರ್ಯಾಲಯ ಚೋರನೂರು ಇವರ ನಡವಳಿಕೆಗಳು

ಉಪಸ್ಥಿತಿ: ಶ್ರೀ ಗುರುರಾಜ್.ಕೆ ದೇಸಾಯಿ, ಉಪತಹಶೀಲ್ದಾರರು

ಅರ್ಜಿದಾರರು: ಟಿ. ಮುನೀರ್‌ಬಾಷ ತಂದೆ ಲೇಟ್ ಸಾಹೇಬ್ ಹುಸೇನ್‌ಸಾಬ್, ತ್ಯಾಗದಾಳ್

ವಿರುದ್ಧದಾರರು: 1) ಮುನ್ವರ್ ಬಾಷ ತಂದೆ ಲೇಟ್ ಸಾಹೇಬ್ ಹುಸೇನ್‌ಸಾಬ್

2) ಆರೀಫ್ ಹುಸೇನ್ ತಂದೆ ಲೇಟ್ ಸಾಹೇಬ್ ಹುಸೇನ್‌ಸಾಬ್

ವಿಷಯ:- ಜಿಗೇನಹಳ್ಳಿ ಗ್ರಾಮದ ಭೂಮಿ ಸ.ನಂ.171/ಬಿ ಕ್ಷೇತ್ರ 1.50 ಎಕರೆ, ಸ.ನಂ.173/ಬಿ/1 ಕ್ಷೇತ್ರ 1.62 ಎಕರೆಗೆ ತಕರಾರು ಬಂದ ಬಗ್ಗೆ ವಿಚಾರಣೆ.

ಪೀಠಿಕೆ:- ಅರ್ಜಿದಾರರು ಮತ್ತು ತಕರಾರುದಾರರಿಗೆ ನೋಟೀಸ್ ಜಾರಿಮಾಡಲಾಯಿತು. ದಿನಾಂಕ 23.06.2016 ರಂದು ಪ್ರಕರಣ ವಿಚಾರಣೆ ಮಾಡಲಾಯಿತು. ಸದರಿ ಅರ್ಜಿದಾರರಲ್ಲಿ ವಂಶವೃಕ್ಷ ವ್ಯತ್ಯಾಸವಿರುವುದಿಲ್ಲ. ತಕರಾರುದಾರರು ಈ ಪ್ರಕರಣದಲ್ಲಿ ತಕರಾರು ಸಲ್ಲಿಸಿದ ಅರ್ಜಿಯನ್ನು ವಾಪಾಸು ಪಡೆದಿರುತ್ತೇವೆ ಎಂದು ಒಪ್ಪಿಗೆ ಪತ್ರನೀಡಿ ನಮ್ಮಗಳಿಗೆ ಯಾವುದೇ ತಕರಾರು ಇಲ್ಲವೆಂದು ತಪ್ಪು ಕಲ್ಪನೆಯಿಂದ ಪರಸ್ಪರ ಒಪ್ಪಿಗೆ ಇದ್ದಿಲ್ಲ ಎಂದು ಈಗ ನಾವು ತಕರಾರು ಇರುವುದಿಲ್ಲವೆಂದು ಒಪ್ಪಿಗೆ ಪತ್ರವನ್ನು ಮಾನ್ಯ ಉಪತಹಶೀಲ್ದಾರರಾದ ತಮ್ಮ ಮುಂದೆ ರೂ.20/- ಛಾಪಾ ಕಾಗದದಲ್ಲಿ ಒಪ್ಪಿಗೆ ಮತ್ತು ಹೇಳಿಕೆ ನೀಡಿರುತ್ತೇವೆ. ಕಾರಣ ತಕರಾರುದಾರರು ಸಲ್ಲಿಸಿದ ಒಪ್ಪಿಗೆ ಪತ್ರದ ಆಧಾರದ ಮೇಲೆ ಅರ್ಜಿದಾರರಿಗೆ ಪೋತಿ ವಾರಸತ್ವದ ಪ್ರಕಾರ ಖಾತೆ ವರ್ಗಾವಣೆ ಮಾಡುವುದು ಸೂಕ್ತವಿದೆಯೆಂದು ಕಂಡುಬಂದ ಹಿನ್ನಲೆಯಲ್ಲಿ ಈ ಕೆಳಗಿನಂತೆ:

ಆರ್‌ಆರ್‌ಟಿ/ತಕರಾರು/38/16-17 **ಆದೇಶ** ದಿನಾಂಕ:23.06.2016

ಪೀಠಿಕೆಯಲ್ಲಿ ವಿವರಿಸಿದ ಕಾರಣದಿಂದಾಗಿ ಅರ್ಜಿದಾರರಿಗೆ ಜಿಗೇನಹಳ್ಳಿ ಗ್ರಾಮದ ಭೂಮಿ ಸ.ನಂ.171/ಬಿ ಕ್ಷೇತ್ರ 1.50 ಎಕರೆ, ಸ.ನಂ.173/ಬಿ/1 ಕ್ಷೇತ್ರ 1.62 ಎಕರೆ ಭೂಮಿ ಪೋತಿ ವಾರಸತ್ವದ ಪ್ರಕಾರ ಖಾತೆಯಲ್ಲಿ ವರ್ಗಾವಣೆ ಮಾಡಲು ದಿನಾಂಕ 23.06.2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಲಾಯಿತು.

ಉಪತಹಶೀಲ್ದಾರ
ನಾಡಕಛೇರಿ
ಚೋರನೂರ
ತಾ॥ ಸಂಡೂರು

O/C

Received
12/7/16